ಶಿವಮೊಗ್ಗ ಡಿಸ್ಟ್ರಿಕ್ಟ್.

1909ನೆ ಇಸವಿ ಏಪ್ರಿಲ್ 17ನೆ ಶನಿವಾರ ಶಿವಮೊಗ್ಗ ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಉದ್ಯೋಗತಃ ಮೆಂಬರರು.

ಹಾಜರು.

1. ಮಿ|| ಎ. ವೃತ್ಯುಂಜಯ ಐಯ್ಯರ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಮತ್ತು ವೈಸ್ ಪ್ರೆಸಿಡೆಂಟರು.
2. ,, ಟಿ. ತಂಬೂಶೆಟ್ಟು, ಶಿವಮೊಗ್ಗ ಡಿವಿಜ್ ಅಸಿಸ್ಟೆಂಟ್ ಕಮಿಷನರು.
3. ,, ಎಂ. ಶ್ರೀನಿವಾಸ ಮೂರ್ತಿಗಳು ಸಾಗರ ಡಿವಿಜ್ ಅಸಿಸ್ಟೆಂಟ್ ಕಮಿಷನರವರು.
4. ,, ಆರ್. ವಿ. ಸುದರಂ ಐಯ್ಯರ್, ಶಿವಮೊಗ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರು.
5. ,, ಮಹಮದ್ ಉಸ್ಮಾನ್ ಸಾಹೇಬರು, ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರು.

ಉದ್ಯೋಗಸ್ಥರಲ್ಲದ ಮೆಂಬರರು.

6. ಮಿ|| ನಾಡಿಗ ಶೀತಾರಾಮಪ್ಪನವರು, ಶಿವಮೊಗ್ಗ.
7. ,, ಉಬ್ರಾಣಿ ಶ್ಯಾನುಭೋಗ ಅಪ್ಪಾಜಪ್ಪನವರು, ಚನ್ನಗಿರಿ.
8. ,, ನಾಡಿಗ ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
9. ,, ಸಾಲೂರಿ ಭವಾನಿರಾಯರು, ಶಿಕಾರಿಪುರ ತಾಲ್ಲೂಕು.
10. ,, ನಾಡಿಗ ಭಾಸ್ಕರರಾಯರು, ಸೊರಬ ತಾಲ್ಲೂಕು.
11. ,, ಬರದವಳ್ಳಿ ಗುರಪ್ಪಗೌಡರು, ಸಾಗರ ತಾಲ್ಲೂಕು.
12. ,, ಶ್ಯಾವುಉಡುಪರು, ನಗರ ತಾಲ್ಲೂಕು.
13. ,, ಹುಮಚದಕಟ್ಟೆ ರಾಮರಾಯರು, ತೀರ್ಥಹಳ್ಳಿ ತಾಲ್ಲೂಕು.
14. ,, ಸಿ. ಸುಬ್ಬರಾಯರು, ಆಡ್ವೋಕೇಟ್, ಶಿವಮೊಗ್ಗ.
15. ,, ಖಾಜಿ ಸಯ್ಯದ್ ಮಹಮ್ಮದ್ ಸಾಹೇಬರು, ಶಿವಮೊಗ್ಗ.
16. ,, ರಟ್ಟಿಹಳ್ಳಿ ಪುಟ್ಟಪ್ಪನವರು, ಸಾಗರ.
17. ,, ಎ. ನರಸಿಂಹ್ಯಯ್ಯಂಗಾರ್ರು, ಸಾಗರ.

ಉದ್ಯೋಗತಃ ಮೆಂಬರರು.

ಗೈರ್ ಹಾಜರು.

1. ಮಿ|| ಎಂ. ನಾರಾಯಣರಾಯರವರು, ಡಿಪ್ಯುಟಿ ಕಮಿಷನರ್ ಮತ್ತು ಪ್ರೆಸಿಡೆಂಟರು.
2. ,, ತಿರುವಲಾಚಾರ್ರು, ಸ್ಕೂಲ್ ಡಿಪ್ಯುಟಿ ಇನ್ಸ್ಪೆಕ್ಟರವರು.

ಉದ್ಯೋಗಸ್ಥರಲ್ಲದ ಮೆಂಬರರು.

ಗೈರ್ ಹಾಜರು.

3. ಮಿ|| ನಾಡಿಗ ರಾಘವೇಂದ್ರಪ್ಪನವರು, ಕುಂಸಿ ಸಬ್ ತಾಲ್ಲೂಕು ಭವತಿ.
4. ,, ರವರಂಡ ಡಬ್ಲ್ಯು. ಈ. ಟಾಮ್ಲಿನ್ಸರವರು, ಶಿವಮೊಗ್ಗ.
5. ,, ಫಾದರ್. ಎಫ್. ಪೊಲ್ಮೆಯವರು, ಶಿವಮೊಗ್ಗ.
6. ,, ತಾಗರ್ತಿ ದೇವಪ್ಪನವರು, ಶಿಕಾರಿಪುರ.
7. ,, ಸಾಹುಕಾರಿ ವಾಸುದೇವರಾಯರು, ನಗರ.
8. ,, ದೇವಾಂಗಿ ರಾಮಣ್ಣಗೌಡರು, ತೀರ್ಥಹಳ್ಳಿ.

1. ಇರಿಗೇಷನ್ ಸೆಸ್ ಫಂಡನ್ನು ಯಾವರೀತಿ ಉಪಯೋಗಿಸಬೇಕೆಂಬ ಬಗ್ಯೂ ಮತ್ತು ಅದಕ್ಕೆ ಸಮ್ಮಂಧಪಟ್ಟ ಅಂದಾಜುಗಳನ್ನು ಯಾವರೀತಿ ತಯಾರಿಸಬೇಕೆಂಬ ವಿಷಯದಲ್ಲಿ ತಲ್ಪಿದ ನಂಬರು 2086—ಲೋ. ಬೋ. 585-07-11ನೆ ಮಾರ್ಚು೦ 24—9—08ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಗಿ ಹಾಲಿ ತಾಲ್ಲೂಕುಗಳಿಂದ ತಲ್ಪಿದ ತಃಖ್ತೆಗಳಲ್ಲಿ ಬೇಕಾದ ಎಲ್ಲಾ ವಿಷಯವೂ ನಮೂದು ಇಲ್ಲದಿರುವದರಿಂದ, ರೆವಿನ್ಯೂ ಕಮಿಷನರ್ ಸಾಹೇಬರವರ ನಂಬರು 9240-8ನೆ ಮಾರ್ಚು೦ 11—3—09ನೆಯ ಹುಕುಮನ್ನು ಅನುಸರಿಸಿ ಸದರಿ ತಃಖ್ತೆಗಳನ್ನು ತಾಲ್ಲೂಕು ಚಾರ್ಜಿನಿಂದ ಆ ಪ್ರಕಾರ ಪ್ರತಿ ತಾಲ್ಲೂಕುಗಳಿಂದಲೂ ಸದರಿ ಬಡ್ಜಟ್ಟುಗಳನ್ನು ತರಿಸಿಕೊಳ್ಳತಕ್ಕದ್ದೆಂತ ತೀರ್ಮಾನಿಸಲಾಯಿತು.

2. ಸುಪಾರೀ ಹಾಳತದಮೇಲೆ ವಿಧಿಸಿದ್ದ ಬಂದು ಆಣೆ ಸೆಸ್ಸಿನ ಶೇಕಡಾ 76 ಅಂಕವು ವೆಜಾ ಆಗಿರುವದ್ದರಿಂದ ಉಂಟಾದ ನಷ್ಟಕ್ಕೆ ಪ್ರತಿಯಾಗಿ ನಂಬರು 1684-90—ಲ್ಯಾ. ರೆ. 490-06-3ನೆ ಮಾರ್ಚು೦ 2—9—07 ಗವರ್ನಮೆಂಟ್ ಪ್ರೊಸಿಡಿಂಗ್ಸಿನಿಂದ ಅಡಿಕೆ ತೋಟಗಳಮೇಲೆ ವಿಧಿಸಿರುವ ಸ್ಪೆಷಲ್ ಸುಂಕದ ಶೇಕಡಾ 76 ಅಂಕವನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡುವದಕ್ಕೆ ಆಗುವದಿಲ್ಲ. ನಂಬರು 5873-81—ಲೋ. ಬೋ. 176-08-2ನೆ ಮಾರ್ಚು೦ 19—12—08ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲ್ಪಟ್ಟು ರಿಕಾರ್ಡು ಮಾಡಲಾಯಿತು.

3. ಶಿವಮೊಗ್ಗ–ಎಡೆಹಳ್ಳಿ ರಸ್ತೆಗೆ ಆಗಬೇಕಾದ ಸ್ಪೆಷಲ್ ರಿಪೇರಿಗೋಸ್ಕರ ಖಾಲಿಸ್ಟು ಡಿಪಾರ್ಟ್‌ಮೆಂಟಿನಿಂದ ಕಂ
ಷ್ ತರೀಕು 1,500 ರೂಪಾಯಿ ಸ್ಯಾಂಕ್ಷ್ ಮಾಡುವದಕ್ಕೆ ಆಗುವದಿಲ್ಲವಾಗಿ ಈ ಸದರಿ ನೊಬಲಗನ್ನು ಡಿಸ್ಟ್ರಿಕ್ಟು ಫಂ
ಲೇ ಬದಗಿಸತಕ್ಕದ್ದೆಂತ ತಲ್ಪಿದ ನಂಬರು 8663–5—ಲೋ. ಬೋ. 246 08–2ನೆ ಮಕ್ರುಂ 5—3—09ನೆ
ಮೆಂಟ್ ಪ್ರೊಸಿಡಿಂಗ್ಸು ಓದಲಾಗಿ ಅನುಕೂಲಾನುಸಾರವಾಗಿ ಡಿಸ್ಟ್ರಿಕ್ಟು ಫಂಡಿನಿಂದ ಸದರಿ ನೊಬಲಗನ್ನು ಕೊಡತಕ್ಕದ್ದೆಂತ
ನಿಸಲಾಯಿತು.

4. ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡು ಮಿಟಿಂಗುಗಳಿಗೆ ಬರತಕ್ಕ ಸರಕಾರೀ ಉದ್ಯೋಗಸ್ಥರಲ್ಲದ ಮೆಂಬ
ಟ್ರಾವಲಿಂಗ್ ಭತ್ತವನ್ನು ಯಾವರೀತಿ ಪಾವತಿ ಮಾಡುವದಕ್ಕೆ ವಿಧಾನವನ್ನು ನಿರ್ಣಯಿಸಿ ಸದರಿ ವಿಧಾನದ ಅನುಸರಣೆಯಲ್ಲಿ
ದರೂ ಬದಲಾವಣೆಯಾಗಬೇಕೆಂತ ಯೋಚಿಸುವ ಬೋರ್ಡುಗಳ ಅಭಿಪ್ರಾಯವನ್ನು ಗವರ್ನಮೆಂಟಿಗೆ ಕಳುಹಿಸತಕ್ಕದ್ದೆಂ
ದ ನಂಬರು 8389–96—ಲೋ. ಬೋ. 216–08–1ನೆ ಮಕ್ರುಂ 27—2—09ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓ
ಟ್ಟು ಸದರಿ ವಿಷಯದಲ್ಲಿ ಎಲ್ಲಾ ತಾಲ್ಲೂಕು ಬೋರ್ಡುಗಳ ಅಭಿಪ್ರಾಯವು ತಲ್ಪಿದಿರುವದರಿಂದ ಮುಂದಿನ ಮಿಟಿಂಗಿನಲ್ಲಿ ಚರ್ಚೆ
ಕ್ಕದ್ದೆಂತ ತೀರ್ಮಾನಿಸಲಾಯಿತು.

5. ಯೂನಿಯರ್ಡಗಳಲ್ಲಿ ಪನೆ ತೆರಿಗೆ ಬಾಕಿ ವಸೂಲಿ ಕ್ರಮದಲ್ಲಿ ನೋಟೀಸ್ ಫೀ ವಿಧಾಯಿಸುವದನ್ನು ಇನ್ನೂ ಮ
ವರುಷದ ವರಿಗೆ ಆಚರಣೆಗೆ ತರಬಾರದೆಂತಲೂ ಅನಂತರ ಈ ವಿಷಯವನ್ನು ಯೋಚಿಸತಕ್ಕದ್ದೆಂತ ತಲ್ಪಿದ ನಂಬರು 8119–
ಲೋ. ಬೋ. 30–07–14ನೆ ಮಕ್ರುಂ 19—2—09ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲ್ಪಟ್ಟು ರಾ
ಮಾಡಲಾಯಿತು.

6. ಗತಿಸಿದ ಡಿಸ್ಟ್ರಿಕ್ಟು ಬೋರ್ಡು ಮೆಂಬರು ಮಿ॥ ರಾಘವೇಂದ್ರಪ್ಪನವರಿಗೆ ಬದಲಾಗಿ ಮಿ॥ ಚೋರಡಿ ರಾಮಚಂದ್ರ
ನವರನ್ನು ನೇಮಕ ಮಾಡಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1392 –
2–09ನೆ ಯಾದಿ ಓದಲಾಗಿ ಸದರಿ ನೇಮಕವನ್ನು ಆಂಗೀಕರಿಸಿ ಗವರ್ನಮೆಂಟಿನವರ ಸ್ಯಾಂಕ್ಷ್ ಖುಶ್ಯೆ ಶಿಫಾರಸು ಮಾಡತ
ದ್ದೆಂತ ತೀರ್ಮಾನಿಸಲಾಯಿತು.

7. ಹೊನ್ನಾಳಿ ತಾಲ್ಲೂಕು ಚಿನಿಕಟ್ಟೆ ಹಾಲಪ್ಪನವರಿಗೆ ಅರ್ಧ ಖರೀದಿಗೆ ಬಂದು ಅವ್ಯತಮಹಲ್ ಹೋರಿಯನ್ನು ಕೊ
ತಕ್ಕದ್ದೆಂತ ತಲ್ಪಿದ ನಂಬರು 1382—25—1—09ನೆ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ಯಾದಿ ಓದಲ್ಪಟ್ಟ
ಬೋರ್ಡಿನವರಿಂದ ಅನುಮೋದಿಸಲ್ಪಟ್ಟಿತು.

8. ಶಿಕಾರಿಪುರ ತಾಲ್ಲೂಕು ಕಲ್ಲುಮನೆ ಗ್ರಾಮದಲ್ಲಿ ಬಂದು ದೊಡ್ಡಿಯನ್ನು ಸ್ಥಾಪಿಸುವ ವಿಷಯದಲ್ಲಿ ತಲ್ಪಿದ ಶಿವಮೊ
ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1300—14–2–09ನೆ ಯಾದಿ ಓದಲಾಗಿ ಅನುಮೋದಿಸಲ್ಪಟ್ಟಿತು.

9. ಶಿಕಾರಿಪುರ ತಾಲ್ಲೂಕು ಕಡೇನಂದಿಹಳ್ಳಿ ಮತ್ತು ಕಳಗಾವಿ ಯೂನಿಯರ್ಡಗಳಲ್ಲಿ 5 ರೂಪಾಯಿ ತಲಬಿನ 3 ಜನ ಕು
ಡಮಾಲಿಗಳಿಗೆ ಬದಲಾಗಿ 6 ರೂಪಾಯಿನ ಇಬ್ಬರು ಕುಡಮಾಲಿಗಳನ್ನ ನೇಮಿಸಬೇಕೆಂತ ಸದರಿ ಯೂನಿಯರ್ಡ ಮಿಟಿಂಗುಗ
ತೀರ್ಮಾನಗಳೊಂದಿಗೆ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1091—11–1–09ನೆ ಯಾ
ಓದಲ್ಪಟ್ಟು ಸದರಿ ಅಭಿಪ್ರಾಯವನ್ನು ಅನುಮೋದಿಸಿ ಗವರ್ನಮೆಂಟಿನವರ ಸ್ಯಾಂಕ್ಷ್ ಖುಶ್ಯೆ ಶಿಫಾರಸು ಮಾಡತಕ್ಕದ್ದೆಂತ ತೀ
ರ್ಮಾನಿಸಲಾಯಿತು

10. ಶಿಕಾರಿಪುರ ತಾಲ್ಲೂಕು ಉಡಗಣಿಕೋಟೆ ಕಂದಕದಮೇಲಿನ ರಸ್ತೆಗೆ ಮರದ ಕಡಕಟ್ಟನ್ನು ಹಾಕಿಸಬೇಕೆಂಬ ವಿಷ
ಯದಲ್ಲಿ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1021—3–2–09ನೆ ಯಾದಿ ಓದಲಾ
ಹಾಜರಿದ್ದ ಎಗ್ಜಿಕ್ಯೂಟಿವ್ ಇಂಜನಿಯರವರು ಸದರಿ ರಸ್ತೆ ತಕ್ಕಷ್ಟು ಅಗಲವಾಗಿರುವದ್ದರಿಂದ ಸದರಿ ಕಡಕಟ್ಟು ಅನವಶ್ಯಕವೆಂ
ಅಭಿಪ್ರಾಯಪಟ್ಟಿದ್ದರಮೇಲೆ ಬೋರ್ಡಿನವರು ಅನುಮೋದಿಸಿದರು.

11. ಸೊರಬ ತಾಲ್ಲೂಕು ಭತ್ರವಹಳ್ಳಿಯಲ್ಲಿರುವ ಮುಸಾಫರ್ ಖಾನೆಯನ್ನು ಹರಾಜು ಹಾಕಿಸುವ ವಿಷಯದಲ್ಲಿ ತಲ್ಪಿದ
ಸಾಗರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1069—10–3–09ನೆ ಯಾದಿ ಓದಲ್ಪಟ್ಟು ಮುಂದಿನ ಮಿಟಿಂಗಿ
ನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

12. ಸಾಗರ ತಾಲ್ಲೂಕು ಹಸರಮಕ್ಕಿ ಹೊಳೆ ದಾಟುವದಕ್ಕೆ ದೋಣಿ ತಯಾರೀ ಬಗ್ಗೆ ಮರಹಣ್ಣನ್ನು ಮುಫತ್ತಾಗಿ ಕೊಡಿಸ
ಬೇಕೆಂಬ ವಿಷಯದಲ್ಲಿ ಸಾಗರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ ನಂಬರು 785—5–1–09ನೆ ಯಾದಿ
ಓದಲಾಗಿ ಡಿಸ್ಟ್ರಿಕ್ಟು ಫಂಡಿನಿಂದಲೆ ಬಂದು ದೋಣಿಯನ್ನು ತಯಾರಿಸಿ ಸಾಲಿಯಾನ ಕಂಟ್ರಾಕ್ಟುದಾರನಿಗೆ ಬಾಡಿಗೆಗೆ ಕೊಡುವದು
ಯುಕ್ತವೆಂತಲೂ, ಇದಕ್ಕೊಸ್ಕರ ಬಂದು ಅಂದಾಜಾವನ್ನು ತರಿಸಿಕೊಳ್ಳತಕ್ಕದ್ದೆಂತಲೂ ತೀರ್ಮಾನಿಸಲಾಯಿತು

13. ಹುಮಚದಕಟ್ಟೆಯಲ್ಲಿ ಮಂಗಳವಾರವೂ, ತೀರ್ಥಹಳ್ಳಿಯಲ್ಲಿ ಬುಧವಾರವೂ ಸಂತೆಗಳಾಗಬೇಕೆಂತ ತಾಲ್ಲೂಕು ಮ
ತ್ತು ಮ್ಯುನಿಸಿಪಲ್ ಬೋರ್ಡುಗಳ ತೀರ್ಮಾನಗಳೊಂದಿಗೆ ತಲ್ಪಿದ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು
785—5–1–09ನೆ ಯಾದಿ ಓದಲಾಗಿ ಸದರೀ ಸ್ಥಳಗಳಲ್ಲಿ ಸಂತೆಗಳು ಅತ್ಯವಶ್ಯಕವಾಗಿರುವದ್ದರಿಂದ ಈ ವಿಷಯದಲ್ಲಿ ಗವ
ರ್ನಮೆಂಟಿನವರ ಸ್ಯಾಂಕ್ಷ್ಗೆ ಬರಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

14 ಈ ಕೆಳಗೆ ನಮೂದಿಸಲ್ಪಟ್ಟಿರುವ ಗ್ರಾಮಗಳಿಗೆ ಒಬ್ಬೊಬ್ಬ ಕುಡಮಾಲಿಗಳನ್ನ ನೇಮಿಸಬೇಕೆಂತ ತೀರ್ಮಾನಿಸಿದ
ತಾಲ್ಲೂಕು ಬೋರ್ಡಿನವರ ಪ್ರೊಸಿಡಿಂಗ್ಸು ಕಾಮಿಯೊಡನೆ ತಲ್ಪಿದ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು
1709—25–2–09ನೆ ಯಾದಿ ಓದಲಾಗಿ ಈ ವಿಷಯ ಮುಂದಿನ ಮಿಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

15. ಶಿವಮೊಗ್ಗ ತಾಲ್ಲೂಕಿನಲ್ಲಿರುವ ಶೃಂಗೇರಿ ಮಠಕ್ಕೆ ಸೇರಿದ ಕೆಲವು ಗ್ರಾಮಗಳನ್ನ ಯೂನಿಯನ್ನಾಗಿ ಮಾಡುವ ವಿಷ
ಯದಲ್ಲಿ ತಲ್ಪಿದ ಸದರೀ ಮಠದ ಅಸಿಸ್ಟೆಂಟ್ ಕಮಿಷನರವರ ನಂಬರು 613—13–1–09ನೆ ಯಾದಿ ಓದಲಾಗಿ ಮುಂದಿ
ಮಿಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

16. ಸ್ಯಾಂಕ್ಷ್ ಬಗ್ಯೆ ಕಳುಹಿಸಿದ ಅಂದಾಜಾಗಳ ಪಟ್ಟಿಯನ್ನು ಓದಲಾಗಿ.

ನಂಬರು.	ತಾಲ್ಲೂಕು ಹೆಸರು.	ಕಾಮಗಾರಿಗಳು.	ಮೊಬಲಗು.	ಷರಾ.
			ರೂ.	
1	ಕುಂಕಿ ...	ಲಾಂದ್ರದ ಕಂಭಗಳು ಮತ್ತು ಬರ್ನರ್ ವಗೈರೆ ಕೊಂಡು ಕೊಳ್ಳುವ ಬಗ್ಯೂ ಮತ್ತು ಅವುಗಳನ್ನು ಆಯನೂರಿನಲ್ಲಿ ನೆಡುವ ಬಗ್ಯೆ.	45	ಅನುಮೋದಿಸಲಾಯಿತು
2	ಹೊನ್ನಾಳಿ ...	ಸಾಸ್ವೇಹಳ್ಳಿ ದೊಡ್ಡಿ ರಿಪೇರಿ	80	ಡಿಟೋ
3	ಕುಂಕಿ ...	ಆಯನೂರಿನಲ್ಲಿ ಲಂಟಾನಾ ವಗೈರೆ ತೆಗೆಯುವ ಬಗ್ಗೆ ...	50	ತಿರಸ್ಕರಿಸಲಾಯಿತು
4	ಶಿಕಾರಿಪುರ ...	ಬಿಡ್ಡಟ್ಟಿನಲ್ಲಿ ನನೂದು ಮಾಡಿರುವ ಮೇರೆ ಶಿರಾಳಕೊಪ್ಪದ ಯೂನಿಯನ್ನಿನಲ್ಲಿ ಗಡಂಗದ ಭಾವಿ ರಿಪೇರಿಗೆ ಬದಲಾಗಿ ಬ್ರಾಹ್ಮಣರ ಕೇರಿಯಲ್ಲಿ V ಮಾದರಿ ಚರಂಡಿ ಕಟ್ಟುವ ಬಗ್ಯೆ.	260	ಅನುಮೋದಿಸಲಾಯಿತು
5	ಡಿಟೋ ...	ಶಿಕಾರಿಪುರ ಮುನಸಾಫರಖಾನೆ ರಿಪೇರಿ ...	483	ಹಣವಿಲ್ಲದ್ದರ ಪ್ರಯುಕ್ತ ಅಮಾನತ್ತು.
6	ಸೊರಬ ...	ಉಳವಿ ಮುನಸಾಫರಖಾನೆ ರಿಪೇರಿ ...	7	ಅನುಮೋದಿಸಲಾಯಿತು
7	ಹೊನ್ನಾಳಿ ...	ನ್ಯಾಮತಿ–ಆರುಂಡಿ ರಸ್ತೆದು ಸಾಲೀಯಾನಾ ರಿಪೇರಿ ...	60	ಡಿಟೋ

17. ಬೋರ್ಡಿನವರ ಒಪ್ಪಿಗೆ ನಿರೀಕ್ಷಣೆಯ ಮೇಲೆ ಪ್ರೆಸಿಡೆಂಟರವರಿಂದ ಸ್ಯಾಂಕ್ಷ್ ಮಾಡಲ್ಪಟ್ಟ ಈ ಕೆಳಗೆ ನನೂದಿಸಿರುವ ಅಂದಾಜಾಗಳ ವೆಚ್ಚ ಓದಲ್ಪಟ್ಟು ಅನುಮೋದಿಸಲ್ಪಟ್ಟವು.

ನಂಬರು.	ತಾಲ್ಲೂಕು.	ಕಾಮಗಾರಿ.	ಮೊಬಲಗು.	ಷರಾ.
			ರೂ.	
1	ಚನ್ನಗಿರಿ ...	ಚನ್ನಗಿರಿ ಮುನಸಾಫರಖಾನೆ ರಿಪೇರಿ ...	100	ಅನುಮೋದಿಸಲ್ಪಟ್ಟವು.
2	ತೀರ್ಥಹಳ್ಳಿ ...	ರಿವೈಜ್ಡ್ ಅಂದಾಜಾದ ಪ್ರಕಾರ ಮೂಳೂರು ಮುನಸಾಫರಖಾನಾ ರಿಪೇರಿ.	359	ಡಿಟೋ

18. ಈ ಕೆಳಗೆ ನನೂದಿಸಿರುವ ಅಂದಾಜಾಗಳು ಬೋರ್ಡಿನವರ ಸ್ಯಾಂಕ್ಷ್ ನಿರೀಕ್ಷಣೆ ಮೇಲೆ ಪ್ರೆಸಿಡೆಂಟರವರಿಂದ ಕೌಂಟರ್ ಸೈನ್ ಮಾಡಲ್ಪಟ್ಟು ಎಗ್ಸಿಕ್ಯೂಟಿವ್ ಇಂಜನೀಯರ್ರವರಿಗೆ ವಾಪಸು ಮಾಡಲ್ಪಟ್ಟವುಗಳು ಅನುಮೋದಿಸಲ್ಪಟ್ಟವು.

ನಂಬರು.	ಕಾಮಗಾರಿ.	ಮೊಬಲಗು.	ಷರಾ.
		ರೂ.	
1	ಉಂಬಳೀ ಬೈಲು 3ನೆ ಕ್ಲಾಸು ಮುನಸಾಫರಖಾನಾ ರಿಪೇರಿ. ...	144	ಅನುಮೋದಿಸಲ್ಪಟ್ಟವು.
2	ಡಿಟೋ ಹೊರಕಟ್ಟಡಗಳ ರಿಪೇರಿ	253	ಡಿಟೋ
3	ಸೊಳಿಂಗದ 3ನೆ ಕ್ಲಾಸು ಮುನಸಾಫರಖಾನಾ ರಿಪೇರಿ	71	ಡಿಟೋ
4	ಡಿಟೋ ಶಿರಾಳಕೊಪ್ಪ	118	ಡಿಟೋ

19. ತಾಳಗುಪ್ಪೆಯಲ್ಲಿ ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂಬ ವಿಷಯದಲ್ಲಿ ತಲ್ಪಿದ ಸಾಗರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 477—11-3-09ನೆ ಯಾದಿ ಓದಲಾಗಿ ಮುಂದಿನ ಮೀಟಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

20. ಕೆಲವು ಅಬಸೀನಿಯರ್ ಟ್ಯೂಟರ್‌ವೆಲ್ಸ್ ಆಪರೇಟರ್‌ಗಳನ್ನು ತರಿಸಿಕೊಡಬೇಕೆಂತ ತಲ್ಪಿದ ಹೊನ್ನಾಳಿ ತಾಲ್ಲೂಕು ವೈಸ್ ಪ್ರಸಿಡೆಂಟರವರ ನಂಬರು 112—1-3-09ನೆ ರಿಪೋರ್ಟು ಓದಲಾಗಿ ಬಂದು ಸದರಿ ಆಪರೇಟರ್ಸನ್ನು ತಾಲ್ಲೂಕು ಬೋರ್ಡಿಗೆ ತರಿಸಿಕೊಡಬಹುದೆಂತ ಅಭಿಪ್ರಾಯಪಟ್ಟರು.

21. 1909ನೆ ಫೆಬ್ರವರಿ ಮಾಹಿಯಲ್ಲಿ ಲೋಕಲ್ ಫಂಡ್ ಜನರಲ್ ಮತ್ತು ಡಿಸ್ಟ್ರಿಕ್ಟ್ ಫಂಡಿನಿಂದ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ಯವರಿಂದ ಮಾಡಲ್ಪಟ್ಟ ಖರ್ಚು ತಖ್ತೆಯೊಂದಿಗೆ ತಲ್ಪಿದ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ನಂಬರು 333—27-3-09ನೆ ಡಾಕೆಟ್ ಓದಲಾಗಿ ರಿಕಾರ್ಡು ಮಾಡಲಾಯಿತು.

ಇಸ್ತಿಹಾರ್‌ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಸುಪಡಿಸುವದೇನಂದರೆ :—ಸ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಜೂ ಆಖೈರು ವರಿಗೆ ಒಂದು ವರ್ಷ ಪರಿಯಂತರ ಶಿವಮೊಗ್ಗ ಟವ್ನ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲ್ಮಾಡುವ ಹಕ್ಕನ್ನು 1909ನೆ ಇಸವಿ ಜೂ 21ನೆ ಸೋಮವಾರ ದಿನ ಮಧ್ಯಾಹ್ನ 12 ಘಂಟೆಗೆ ಈ ಕೆಳಗೆ ಕಾಣಿಸುವ ಷರತ್ತುಗಳಿಗೆ ವಳಪಟ್ಟು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

2. ಟವ್ನ ಮುನಿಸಿಪಾಲಿಟಿಯ ಪ್ರೆಸಿಡೆಂಟರವರ ಆಫೀಸಿನಲ್ಲಿ :—ಪ್ರೆಸಿಡೆಂಟರವರಿಂದ ಅಥವಾ ಅವರ ಗೈರುಹಾಜರಿನಲ್ಲಿ ವೈಸ್ ಪ್ರೆಸಿಡೆಂಟರವರಿಂದ ಹರಾಜು ಮಾಡಲ್ಪಡುತ್ತೆ.

3. ಸದರಿ ಹಕ್ಕಿನ ಹರಾಜನ್ನು ಆಖೈರು ಸವಾಲ್‌ದಾರ್ರ ಹೆಸರಿಗೆ ಉಳಿಸಲ್ಪಡುತ್ತೆ. ವೈಸ್ ಪ್ರೆಸಿಡೆಂಟರವರು ಸದರಿ ಹರಾಜನ್ನು ನಡಿಸುವ ಸಂದರ್ಭದಲ್ಲಿ ಹಂತಜು ಪ್ರೆಸಿಡೆಂಟರವರ ಮಂಜೂರಾತಿಗೆ ವಳಪಟ್ಟದ್ದಾಗಿ ಇರುತ್ತೆ. ಸವಾಲನ್ನು ಕಾರಣ ನಮೂದಿಲ್ಲದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸ್ವತಂತ್ರವನ್ನು ಪ್ರೆಸಿಡೆಂಟರವರು ಉಳಿಸಿಕೊಂಡಿರುತ್ತಾರೆ. ಹರಾಜಿನಲ್ಲಿ ಬರಬಹುದಾದ ದರಖಾಸ್ತು ಸಮರ್ಪಕವಾಗಿ ಇಲ್ಲವೆಂದು ತಿಳಿಯಬಂದರೆ ಸದರಿ ಹಕ್ಕನ್ನು ಟೆಂಡರ್ ಮೂಲಕ ಅಥವಾ ಅನ್ಯಾವ ರೀತಿಯಿಂದಾಗಲಿ ವಿಲೇವಾರಿಮಾಡುವ ಅಧಿಕಾರವನ್ನು ಸಹ ಪ್ರೆಸಿಡೆಂಟರವರು ಉಳಿಸಿಕೊಂಡಿರುತ್ತಾರೆ.

4. ಹರಾಜಿನಲ್ಲಿ ದರಖಾಸ್ತು ಮಾಡಬೇಕಾಗಿ ಅಪೇಕ್ಷೆಯುಳ್ಳ ಮನುಷ್ಯರು ಖುದ್ದು ಆಗಲೀ ಅಥವಾ ಏಜಂಟರ ಮೂಲಕವಾಗಲೀ ಹಾಜರಾಗಬೇಕು. ಪ್ರತಿ ಒಬ್ಬ ದರಖಾಸ್ತುದಾರನು 100—0—0 ರೂಪಾಯಿ ತೇವಣಿಯನ್ನು ಮುಂಚಿತವಾಗಿಯೇ ಇಟ್ಟುರಬೇಕು. ತಿರಸ್ಕರಿಸಲ್ಪಡುವ ದರಖಾಸ್ತುದಾರ್ರಿಗೆ ಈ ಮೊಬಲಗನ್ನು ಹರಾಜು ಖೈದು ಆದಕೂಡ್ಲೆ ವಾಪಸು ಮಾಡಲ್ಪಡುತ್ತೆ.

5. ಜಡ ದರಖಾಸ್ತುದಾರನು ಇನ್ನು ಮುಂದೆ ಕಂಟ್ರಾಕ್ಟರ್ ಎಂಬುದಾಗಿ ಕರೆಯಲ್ಪಡುವನು. ಹರಾಜು ಸದರಿಯವರ ಹೆಸರಿಗೆ ನಿಂತ ಆದಕೂಡ್ಲೆ ಅವರು ಇಟ್ಟುರುವ ತೇವಣಿ ಮೊಬಲಗು ಸೇರಿ ಹರಾಜು ಮೊಬಲಗಿನ ಹನ್ನೆರಡನ್ನೇ ಬಂದುಭಾಗಕ್ಕೆ ಭರ್ತಿ ಆಗುವ ಮೊಬಲಗನ್ನು ಕೊಡತಕ್ಕದ್ದು. ಇದಲ್ಲದೆ 1909ನೆ ಜೂ 28ನೆ ತಾರೀಖಿಗೆ ಅಥವಾ ಅದಕ್ಕೆ ಮುಂಚೆ ಹರಾಜು ಮೊಬಲಗಿನ ಹನ್ನೆರಡನೆ ಎರಡು ಭಾಗಕ್ಕಾಗುವಷ್ಟು ಮೊಬಲಗನ್ನು ಸಹ ಕೊಡತಕ್ಕದ್ದು. ಸದರಿ ತಾರೀಖಿನೊಳಗೆ ತಾನು ಮತ್ತು ತನ್ನ ವಾರಸುದಾರ್ರು ಈ ಕೆಳಗೆ ನಮೂದಾಗುವ ಷರತ್ತುಗಳಂತೆ ನಡದುಕೊಳ್ಳುವದಕ್ಕೆ ಬದ್ಧರಾಗಿ ಇರುವದಾಗಿ ಭಾಷಾಕಾರದ ದಸ್ತೇಲೆ ಬಂದು ಬಡಂಬಡಿಕೆಯನ್ನು ಬರದುಕೊಡಬೇಕು. ಮೇಲೆ ಹೇಳಿದಂತೆ ತೇವಣಿ ಇಡುವದರಲ್ಲಾಗಲಿ ಅಥವಾ ಬಡಂಬಡಿಕೆಯನ್ನು ಬರದುಕೊಡುವದರಲ್ಲಾಗಲೀ, ತಪ್ಪಿದಲ್ಲಿ ಪೂರ್ವಭಾವಿಯಾಗಿ ಇಟ್ಟದ್ದ ತೇವಣೀ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕ್ಕೊಂಡು, ಮುಂದಿನ ಟೋಲ್ ವಸೂಲ್‌ಮಾಡುವ ಹಕ್ಕನ್ನು ಪ್ರೆಸಿಡೆಂಟರವರಿಂದ ಕೂಡ್ಲೆ ಪುನಹಾ ಹರಾಜು ಅಥವಾ ಇತರೇ ವಿಧವಾಗಿ ವಿಲೇವಾರಿ ಮಾಡಲ್ಪಡುತ್ತೆ.

ಷರತ್ತುಗಳು.

(1) ಹರಾಜಿನ ಮೊಬಲಗನ್ನು 1909ನೆ ಇಸವಿ ಜುಲೈ ಮೊದಲುಗೊಂಡು ಸಮವಾದ ಮಾಹೇಯಾನ ಖಿಸ್ತುಗಳಲ್ಲಿ ವಾಯಿತಿ ಮಾಡತಕ್ಕದ್ದಾಗಿರುತ್ತೆ. ಪ್ರತಿ ಒಂದು ಖಿಸ್ತು ಮೊಬಲಗು ಆ ತಿಂಗಳಿನ ಗುತ್ತಿಗೆಯಾಗಿ ಭಾವಿಸಲ್ಪಡುತ್ತೆ ಮತ್ತು ಅದನ್ನು ಆ ತಿಂಗಳಿನ 20ನೆ ತಾರೀಖು ಅಥವಾ ಅದಕ್ಕೆ ಮುಂಚಿತವಾಗಿ ಖಜಾನೆಗೆ ಜಮಾ ಮಾಡಿಸತಕ್ಕದ್ದಾಗಿರುತ್ತೆ ಇದಕ್ಕೆ ತಪ್ಪಿದರೆ ಸದರಿ ಕಂಟ್ರಾಕ್ಟ್‌ದಾರನು ಟೋಲನ್ನು ವಸೂಲ್ಮಾಡುವದನ್ನು ಮನ್ನಾ ಮಾಡುವದಕ್ಕೂ ಅವನು ತೇವಣಿ ಇಟ್ಟುರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಕ್ಕು ಉಳಿದಿರುವ ಕಾಲಗಳ ಟೋಲ್ ವಸೂಲಿ ಹಕ್ಕನ್ನು ಯುಕ್ತಾನುಸಾರವಾಗಿ ಪುನಃ ಹರಾಜ್ ಮೂಲಕ ಟೆಂಡರ್ ಮೂಲಕ ಅಥವಾ ಇತರೇವಿಧವಾಗಿ ವಿಲೇವಾರಿಮಾಡಲು ಪ್ರೆಸಿಡೆಂಟರವರಿಗೆ ಸ್ವತಂತ್ರವಿರುತ್ತೆ. ಸದರಿ ಎರಡನೆ ಹರಾಜು ಅಥವಾ ವಿಲೇವಾರಿಯಲ್ಲಿ ಉಂಟಾವ ನಷ್ಟಕ್ಕೆ ಷರತ್ತಿಗೆ ತಪ್ಪಿಹೋದ ಕಂಟ್ರಾಕ್ಟ್‌ದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಅದರಿಂದ ಆಗುವ ಆದಾಯಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಆದರೆ ನಷ್ಟವಾಗುವ ಸಂದರ್ಭದಲ್ಲಿ ಅಂದರೆ ಮೊದಲು ಹರಾಜುಗಿಂತ ಎರಡನೇ ಹರಾಜಿನಲ್ಲಿ ಕಡಮೆಯಾಗುವ ಪಕ್ಷದಲ್ಲಿ ಈವಿಧ್ಯಾದ ಮೊಬಲಗನ್ನು ಭರ್ತಿ ಮಾಡುವದಕ್ಕೆ ಕಂಟ್ರಾಕ್ಟ್‌ದಾರನು ಬದ್ಧನಾಗಿರುತ್ತಾನೆ. ನಷ್ಟವಾದ ಸಂದರ್ಭದಲ್ಲಿ ದಂಡವಾಗಿ ತೆಗೆದುಕೊಂಡ ತೇವಣಿ ಮೊಬಲಗಿನಿಂದ ಅಂಥಾ ನಷ್ಟವನ್ನು ಭರ್ತಿ ಬಗ್ಗೆ ಉತ್ತರ ಹಾಕಲ್ಪಡುವುದು. ದಂಡವಾಗಿ ಇಟ್ಟುಕೊಂಡ ತೇವಣಿ ಮೊಬಲಗು ನಷ್ಟಕ್ಕಿಂತ ಜಾಸ್ತಿಯಾಗಿ ಇರುವ ಸಂದರ್ಭದಲ್ಲಿ ಅಂಥಾ ತೇವಣೀ ಮೊಬಲಗು ಪೂರಾವನ್ನೂ ಮುನಿಸಿಪಾಲಿಟಿಗೆ ಜಮಾ ಮಾಡಲ್ಪಡುತ್ತೆ.

(2) ತೇವಣಿಯಾಗಿ ಇಟ್ಟುರುವ ಹರಾಜು ಮೊಬಲಗಿನ 12ರ ಮೂರನೇ ಭಾಗವನ್ನು ಕಂಟ್ರಾಕ್ಟ್‌ದಾರನು ಷರತ್ತು ಪ್ರಕಾರ ನಡದುಕೊಳ್ಳುವ ಖಾತ್ರಿಗೋಸ್ಕರವಾಗಿ ಇಟ್ಟದ್ದೆಂದು ಭಾವಿಸಲ್ಪಡುತ್ತೆ. ಅದನ್ನು ದಂಡವಾಗಿ ಸೇರಿಸಿಕೊಳ್ಳದೇ ಇದ್ದ ಪಕ್ಷದಲ್ಲಿ ಆಖೈರು ತಿಂಗಳಿನಗಳ ಖಿಸ್ತಿಗೆ ಜಮಾ ಮಾಡಿಸಲ್ಪಡುತ್ತೆ.

(3) ಯಾವ ಕಾರಣದಿಂದಲೇ ಆಗಲೀ ಕಂಟ್ರಾಕ್ಟ್ದಾರನು ಖಿಸ್ತು ಮೊಬಲಗಿನ ರಿಮಿಷ್೯ ಆಗಲೀ ಅಥವಾ ಕಡಮೆಯಾಗಿ ತೆಗದುಕೊಳ್ಳುವ ರಿಯಾಯತಿಯನ್ನಾಗಲೀ ಕೇಳಲು ಹಕ್ಕು ಇರುವದಿಲ್ಲ.

(4) ಖಿಸ್ತು ಪ್ರಕಾರ ಪಾವತೀವಾಡದೇ ಬಾಕಿಯಲ್ಲಿ ಬಂದ ಮೊಬಲಗಿನಮೇಲೆ ಕೇಕಡಾ ಸಾಲಿಯಾನಾ 6 ರೂಪಾಯಿನಂತೆ ತಪ್ಪಿಹೋದ ತಾರೀಖು ಲಾಗಾಯಿತು ಬಡ್ಡಿಯನ್ನು ವಸೂಲ್ ಮಾಡಲ್ಪಡುವದು.

(5) ಟೋಲ್‌ಗಳು ಈ ಕೆಳಗೆ ನಮೂದು ಮಾಡಿರುವ ದರಗಳ ಪ್ರಕಾರ ವಸೂಲ್ ಮಾಡತಕ್ಕದ್ದು.

		ರೂ. ಆ. ಪೈ.
1.	ಬಂದು ಜೊತೆ ಅಥವಾ ಅನೇಕ ಜೊತೆ ಎತ್ತು, ಕೋಣ, ಕುದುರೆ, ಕತ್ತೆ, ಇವುಗಳಿಂದ ಎಳೆಯಲ್ಪಡುವ ಭರ್ತಿ ಗಾಡಿ 1ಕ್ಕೆ.	0—4—0
2.	ಬಂದು ಜೊತೆ ಅಥವಾ ಅನೇಕಜೊತೆ ಎತ್ತು, ಕೋಣ, ಕುದುರೆ, ಕತ್ತೆ, ಇವುಗಳಿಂದ ಎಳೆಯಲ್ಪಡುವ ಖಾಲಿ ಗಾಡಿ 1ಕ್ಕೆ.	0 2 0
3.	ಬಂದು ಎತ್ತು, ಕೋಣ, ಕುದುರೆ ಯಾ ಕತ್ತೆಯಿಂದ ಎಳೆಯಲ್ಪಡುವ ಭರ್ತಿ ಗಾಡಿ 1ಕ್ಕೆ ...	0 2 0
4.	ಡಿಟೋ ಡಿಟೋ ಖಾಲಿ ಗಾಡಿ 1ಕ್ಕೆ ...	0 1 0

(6) ಗಾಡಿಗಳ ಮೇಲೆ ವಸೂಲ್ ಮಾಡಬೇಕಾದ ಟೋಲ್ ದರಗಳನ್ನು ಸ್ಪಷ್ಟವಾಗಿ ತಿಳಿಯುವಹಾಗೆ ಕನ್ನಡದಲ್ಲಿಯೂ ಮತ್ತು ಇಂಗ್ಲೀಷಿನಲ್ಲಿಯೂ ಬಂದು ಬೋರ್ಡುಮೇಲೆ ಬರದು ಟೋಲ್‌ಗೇಟ್ ಸವಿಾಪ ತಗಲುಹಾಕತಕ್ಕದ್ದು.

(7) ಬಂದು ಗಾಡಿಗೆ ಬಂದೇ ದಿವಸಕ್ಕೆ ಎರಡಾವರ್ತಿ ಟೋಲ್ ವಸೂಲು ಮಾಡಕೂಡದು, ರಾತ್ರಿ 12 ಘಂಟೆಯಿಂದ ಮರುದಿನ ರಾತ್ರಿ 12 ಘಂಟೆ ವರಿಗೆ ಬಂದು ದಿನವೆಂದು ಭಾವಿಸಲ್ಪಡುತ್ತೆ.

(8) ದಂಡಿನವರನ್ನು ಸಾಗಿಸತಕ್ಕ ಬಗ್ಗೆ ಬರುವವರ ಗಾಡಿಗಳಮೇಲೂ ಮಿಲಿಟರಿ ಸಾಮಾನುಗಳನ್ನೂ ಹೇರಿದ ಗಾಡಿಗಳ ಮೇಲೂ ಡ್ಯೂಟೀಮೇಲೆ ಪ್ರಯಾಣಮಾಡುವ ಪೊಲೀಸ್ ಆಫಿಸರ ಗಾಡಿಯಮೇಲೂ ಸರ್ಕಾರಿ ಗಾಡಿಗಳಮೇಲೂ ಆಯಾಯ ಅಧಿಕಾರಿಗಳಿಂದ ಟೋಲ್ ವಿನಾಯಿತೀ ಬಗ್ಗೆ ಕೊಡಲ್ಪಟ್ಟ್ಟ್ಟ ಬಹುದಾದ ಸರ್ಟಿಫಿಕೇಟ್‌ಗಳ ಆಧಾರಗಳಮೇಲೂ ವಿನಾಯಿತಿ ಕೇಳಿದ್ದಲ್ಲಿ ಸದರಿ ಗಾಡಿಗಳಮೇಲೂ ಟೋಲ್ ವಸೂಲ್ ಮಾಡಕೂಡದು.

(9) ಮುನಿಸಿಪಾಲಿಟಿಯಿಂದ ಮೊಹತರ್ಫಾ ಕಂದಾಯ ವಸೂಲು ಮಾಡಲ್ಪಟ್ಟಿರುವ ಗಾಡಿಗಳ ಮೇಲೆ ಟೋಲ್ ವಸೂಲ್ ಮಾಡಕೂಡದು. ಅಂಥಾ ಗಾಡಿಗಳಿಗೆ ವೈಸ್ ಪ್ರೆಸಿಡೆಂಟರವರು ನಂಬರ್ ಹಾಕಿಸುವದಲ್ಲದೆ ಬಂದು ಪೈಸನ್ನೂ ಸಹ ಕೊಡುತ್ತಾರೆ.

(10) ಗಾಡಿಗಳ ಮೇಲೆ ಟೋಲ್ ವಸೂಲು ಮಾಡತಕ್ಕ ವಿಧಾನವು ಸಾಧಾರಣವಾಗಿ ಲೇಟ್ ಜೀಫ್ ಕಮಿಷನರವರ ನಂಬರ್ 274, ತಾರೀಖು 4ನೆ ನವೆಂಬರ್ 1876ನೆ ಇಸವಿ ನೋಟಿಫಿಕೇರ್ಷ ಪ್ರಕಾರ ನಡಪಡತಕ್ಕದ್ದು.

(11) ಕಂಟ್ರಾಕ್ಟ್ದಾರನು ಪ್ರತಿ ಬಂದು ಗೇಟಿನಲ್ಲಿಯೂ ಪ್ರತಿ ದಿನವೂ ಕರೆಕ್ಟಾಗಿ ವಸೂಲ್‌ಮಾಡುವ ಮೊಬಲಗು ತೋರಿಸುವ ಬಗ್ಗೆ ಕ್ರಮವಾಗಿ ಲೆಖ್ಖವನ್ನಿಡಬೇಕು. ಪ್ರತಿ ತಿಂಗಳೆ ಆಖೈರಿನಲ್ಲಿಯೂ ಅದರ ಬಂದು ನಕಲನ್ನು ತನಿಖೆಬಗ್ಗೆ ವೈಸ್ ಪ್ರೆಸಿಡೆಂಟರವರ ಆಫೀಸಿಗೆ ಕಳುಹಿಸಬೇಕು. ಈ ಲೆಖ್ಖವನ್ನು ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರೂ, ಶಿವಮೊಗ್ಗ ತಾಲ್ಲೂಕು ಅವುಲ್ದಾರೂ, ಮತ್ತು ಈ ಬಗ್ಗೆ ಪ್ರೆಸಿಡೆಂಟರವರಿಂದ ಅಧಿಕಾರ ಹೊಂದಿದ ಇತರೇ ಹುದ್ದೇದಾರೂ, ಅಥವಾ ಮುನಿಸಿಪಲ್ ಕೌನ್ಸಿಲರ್, ತನಿಖೆ ಮಾಡತಕ್ಕ ಬಗ್ಗೆ ಯಾವಾಗಲೂ ಅವಕಾಶ ಇರಬೇಕು.

(12) ಪ್ರೆಸಿಡೆಂಟರವರ ಅಪ್ಪಣೇ ಶಿವಾಯಿ ಈ ಹಕ್ಕನ್ನು ಖರೀದಿ, ದಾನ, ಅಥವಾ ಇತರವಿಧವಾಗಿ ವಿಲೇವಾರಿ ಮಾಡುತ್ತ ತಮ್ಮವಳಗೆ ಇತರರಿಗೆ ವಹಿಸಕೂಡದು ಈರೀತಿ ಪರಾಧೀನ ಮಾಡಲು ಕೊಡುವ ದರಖಾಸ್ತನ್ನು ಕಾರಣವನ್ನು ತಿಳಿಸದೆ ತಿರಸ್ಕರಿಸುವ ಸ್ವತಂತ್ರವನ್ನು ಪ್ರೆಸಿಡೆಂಟರವರೇ ಇಟ್ಟುಕೊಂಡಿರುತ್ತಾರೆ.

(13) ಕಂಟ್ರಾಕ್ಟ್ದಾರು ಎಲ್ಲಾ ಗೇಟುಗಳಲ್ಲೂ ಟೋಲನ್ನು ವಸೂಲ್‌ಮಾಡುವದಕ್ಕೆ ನೇಮಿಸಿಕೊಳ್ಳುವ ಜನಗಳ ಹೆಸರುಗಳನ್ನು ವೈಸ್ ಪ್ರೆಸಿಡೆಂಟರವರ ಆಫೀಸಿಗೆ ರಿಪೋರ್ಟು ಮಾಡತಕ್ಕದ್ದು.

(14) ಈ ಎಲ್ಲಾ ಷರತ್ತುಗಳ ಮೇಲೆ ಸರಿಯಾಗಿ ನಡದುಕೊಳ್ಳುವದಕ್ಕೆ ಕಂಟ್ರಾಕ್ಟ್ದಾರನು ಜವಾಬ್ದಾರನಾಗಿರುತ್ತಾನೆ. ತಪ್ಪಿದಲ್ಲಿ ಪ್ರತಿಯೊಂದು ತಪ್ಪಿತಕ್ಕೂ 50 ರೂಪಾಯಿಗೆ ಮಿಾರದಂತೆ ಕಂಟ್ರಾಕ್ಟ್ದಾರನಮೇಲೆ ಜುಲ್ಮಾನೆಯನ್ನು ವಿಧಿಸುವದಕ್ಕೆ ಪ್ರೆಸಿಡೆಂಟರವರಿಗೆ ಅಧಿಕಾರವಿರುತ್ತೆ. ಈರೀತಿ ವಿಧಿಸಿದ ಜುಲ್ಮಾನೆಯನ್ನು ಕಂಟ್ರಾಕ್ಟ್ದಾರನು ಕೂಡ್ಲೇ ಪಾವತಿ ಮಾಡತಕ್ಕದ್ದು. ತಪ್ಪಿದರೆ ಇನ್ನು ಮುಂದೆ ಕಂಟ್ರಾಕ್ಟ್ದಾರನು ಟೋಲನ್ನು ವಸೂಲ್ಮಾಡುವದನ್ನು ಮನ್ನಾ ಮಾಡಿಸುವದಕ್ಕೂ, ಉಳಿದ ಕಾಲಗಳ ಸದರಿ ಹಕ್ಕನ್ನು ಹರಾಜ್ ಅಥವಾ ಇತರವಿಧವಾಗಿ ವಿಲೇವಾರಿ ಮಾಡುವದಕ್ಕು ಸಹ ಪ್ರೆಸಿಡೆಂಟರವರಿಗೆ ಅಧಿಕಾರವಿರುತ್ತೆ. ಇಂಥಾ ಎರಡನೇ ಹರಾಜ್ ಅಥವಾ ವಿಲೇವಾರಿಯ ನೋಲಿ ಹೇಳಿರುವ ಬಂದನೇ ಷರತ್ತಿನಲ್ಲಿ ವಿವರಿಸಿರುವಂತೆ ಕಂಟ್ರಾಕ್ಟ್ದಾರನನ್ನು ನಷ್ಟಕ್ಕೆ ಗುರಿ ಮಾಡಲ್ಪಡುತ್ತೆ.

(15) ಮೇಲೆ ಹೇಳಿದಂತೆ ಜುಲ್ಮಾನೆ ವಿಧಿಸುವದು ಅಥವಾ ಹರಾಜನ್ನು ರದ್ದುಮಾಡುವದು ಮತ್ತು ಕಂಟ್ರಾಕ್ಟ್ದಾರನನ್ನು ಅಥವಾ ಅವನ ನೌಕರರನ್ನು ಯಾವದಾದರೂ ತಕ್ಸೀರಿಗಾಗಿ ಪ್ರಾಸಿಕ್ಯೂಷ್ಷ ಮಾಡುವದಕ್ಕೇ ಆಗಲಿ ಅಥವಾ ಅವರಮೇಲೆ ಲಾ ಅನುಸರಿಸಿ ಇನ್ನು ಯಾವವಿಧವಾದ ಕ್ರಮ ನಡಿಸುವದಕ್ಕೇ ಆಗಲೀ ಅಡ್ಡಿಯಾಗಿ ಇರುವದಿಲ್ಲ.

ಎ. ಮೃತ್ಯುಂಜಯ ಐಯ್ಯರ್,
ಫಾರ್ ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟ್.

ನೋ ಟೀ ಸ್.

ತಾರೀಖು 21ನೆ ಮೇ 1909ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಚಿಕ್ಕಮಗಳೂರು, ತರೀಕೆರೆ, ಎಡೇಹಳ್ಳಿ, ಕೊಪ್ಪ ಮ್ಯುನಿಸಿಪಾಲಿಟಿಗಳಲ್ಲಿಯೂ ಮತ್ತು ಸಕ್ರೆಪಟ್ಣ ಯೂನಿಯನ್ನಲ್ಲಿಯೂ ನಡಿಯುವ ಸಂತೆಗಳಲ್ಲಿ ಸ೯ 1909ನೆ ಇಸವಿ ಜುಲೈ 1ರ ಲಾ

ಗಾಯಿತು 1910ನೆ ಇಸವಿ ಜೂ೯ 30ರ ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕು ದಾರಿಯನ್ನು ಪರಸ್ಪರ ಚಿಕ್ಕಮಗಳೂರು ಪೈಸ್ ಪೈಸಿಡೆಂಟರವರು, ತರೀಕೆರೆ ತಾಲ್ಲೂಕು ಅಮಲ್ದಾರ್ರವರು, ಎಡೇಹಳ್ಳಿ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್ದಾರ್ರವರು, ಕೊಪ್ಪ ತಾಲ್ಲೂಕು ಅಮಲ್ದಾರ್ರವರು ಮತ್ತು ಸಕ್ರೆಪಟ್ಟಣ ತಾಲ್ಲೂಕು ಅಮಲ್ದಾರ್ರವರು ತಮ್ಮ ತಮ್ಮ ಆಫೀಸುಗಳಲ್ಲಿ ಈ ಕೆಳಗೆ ಪ್ರತಿ ಬಂದು ಸ್ಥಳಿದ ಬಾಜೂದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿ ಸುತ್ತಾರೆ :—

ಚಿಕ್ಕಮಗಳೂರು ...
ತರೀಕೆರೆ ... } ಹರಾಜು ತಾರೀಖು 21ನೆ ಜೂ೯ 1909ನೆ ಸೋವ.ವಾರ.
ಎಡೇಹಳ್ಳಿ ...
ಕೊಪ್ಪ ...
ಸಕ್ರೆಪಟ್ಟಣ ...

2. ಹರಾಜಿನಲ್ಲಿ ಪಡಿಯತಕ್ಕವರು ಸಂತೆಯ ದಿವಸ ಮಾರ್ಕಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ದರದಂತೆಯೇ ಗಾಡಿ ಮತ್ತು ಜಾನ್ವಾರು ವಗ್ಗೆರೇಗಳ ಮೇಲೆ ಫೀ ವಸೂಲು ಮಾಡತಕ್ಕದ್ದು. ಸದರೀ ದರಕ್ಕಿಂತ ಜಾಸ್ತಿ ದರ ವಸೂಲ್ಮಾಡಕೂಡದು.

3. ಈ ಹರಾಜು ಕಡೂರು ಡಿಸ್ಟ್ರಿಕ್ಟ್ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪೈಸಿಡೆಂಟರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಸದರೀಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ ಅಥವಾ ಇನ್ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಆಗಲಿ ಅಧಿಕಾರ ಉಳ್ಳವರಾಗಿರುತ್ತಾರೆ.

4. ಕಂಟ್ರಾಕ್ಟುದಾರನು ಸುತ್ತಾ ಮೊಬಲಗನ್ನು ಹನ್ನೆರಡು ತಿಂಗಳ ಸಮಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆಯ ಕಂತನ್ನು ಆ ಮಾಹೆ ಆಖೈರಾದ ತಾರೀಖು 10 ರೊಳಗೆ ವಸೂಲ್ ಕೊಟ್ಟು ರಶೀತಿ ಪಡಿಯತಕ್ಕದ್ದು.

5. ಹರಾಜ್ ಕೈದಾದಕೂಲ್ಲಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಬಾಬತು ಕಂಟ್ರಾಕ್ಟು ಯಾ ಕಂತು ಮೊಬಲಗನ್ನ ಡಿಪಾಜಿಟ್ಟಿನಲ್ಲಿ ಇಡಬೇಕು. ಕಂಟ್ರಾಕ್ಟು ಷರತ್ತುಗಳಮೇರೆ ಸರಿಯಾಗಿ ನಡದುಕ್ಕೊಂಡರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಂತು ಬಗ್ಗೆ ವಸೂಲ್ ಕೊಡುತ್ತೆ.

6. ಹರಾಜು ಖೈದಾದ ಕೂಲ್ಲೆ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಹರಾಜ್ ಹಕ್ಕುದಾರಿಯನ್ನು ಪುನಹ ಹರಾಜ್ ಮಾಡುತ್ತೆ. ಎರಡನೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಪುರು ಕಂಟ್ರಾಕ್ಟುದಾರ್ ಯಾ ಹರಾಜು ದಾರನನ್ನು ಗುರಿಪಡಿಸುತ್ತೆ. ಪ್ರತಿ ಮಾಹೆಯಲ್ಲು ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ವಸೂಲ್ ಕೊಡಲು ತಪ್ಪಿದರೆ ಪಾವತಿ ಮಾಡಬೇಕಾಗಿರುವ ಮೊಬಲಗಿನಮೇಲೆ ಪಾವತೀ ಮಾಡುವ ತಾರೀಖಿನ ವರಿಗೆ ಮಾಹೇಯಾನಾ ರೂಪಾಯಿ ಬಂದಕ್ಕೆ ಬಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ ಮಾಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಪೈಸಿಡೆಂಟರವರು ಇಷ್ಟ್ಟಪಟ್ಟಲ್ಲಿ ಲುಕ್ಸಾನಿಗೆ ಪುರು ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಹರಾಜ್ ಮಾಡಲ್ಪಡುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರಿ ನಫೆಗೆ ಹಕ್ಕುದಾರನಾಗಿರುವದಿಲ್ಲ.

7. ಕಂಟ್ರಾಕ್ಟುದಾರನು ಯಾವ ಕಾರಣದಿಂದಲೂ ಗುತ್ತಿಗೆ ಮೊಬಲಗನ್ನು ಯಾವ ರಿಮಿಷ್ಷ ಮಾಡೋಣವನ್ನಾಗಲೀ ಅಥವಾ ಕಮ್ಮಿ ಮಾಡೋಣವನ್ನಾಗಲಿ ಯಾ ಪರಿಹಾರ ದ್ರವ್ಯವನ್ನಾಗಲೀ ಕೇಳಕೂಡದು.

8. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಕರಾರ್ವಾಕಾ ಲೆಕ್ಕವನ್ನು ಇಡಬೇಕು. ಸದರಿ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರ್ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನವುಕರರೇ ಆಗಲಿ ವಿರೋಧವಾಗಿ ನಡದುಕ್ಕೊಂಡರೆ ಸದರಿ ಕಂಟ್ರಾಕ್ಟನ್ನು ವಜಾ ಮಾಡುತ್ತೆ, ಮತ್ತು ಪೈಸಿಡೆಂಟ್ ಸಾಹೇಬರವರ ಮುನಾಸಬ್ 25 ರೂಪಾಯಿಗಳಿಗೆ ಮಿಗಾದಂತೆ ಕಂಟ್ರಾಕ್ಟುದಾರಿಗೆ ಜುಲ್ಮಾನೆ ವಿಧಿಸುವದರಲ್ಲಿ ಬರುತ್ತೆ.

ವಸೂಲು ಮಾಡಬೇಕಾದ ದರಗಳು.

ನಂಬರ್.	ಬಾಬುಗಳು.	ಚಿಕ್ಕಮಗಳೂರು.		ತರೀಕೆರೆ.		ಎಡೇಹಳ್ಳಿ.		ಕೊಪ್ಪ.		ಸಕ್ರೆಪಟ್ಟಣ.	
		ಆ.	ಪೈ.	ಆ.	ಪೈ.	ಆ.	ಪೈ.	ಆ.	ಪೈ.	ಆ.	ಪೈ.
1	ಭರ್ತಿ ಗಾಡಿ 1ಕ್ಕೆ	1	0	1	0	1	0	1	0	1	0
2	ಖಾಲಿ ಡಿಟೋ	0	3	0	3	0	3	0	3	0	6
3	ಎತ್ತು, ಹಸು, ಎಮ್ಮೆ, ಕೋಣ ಮತ್ತು ಕುದುರೆ ಹೊರೆ ಪ್ರತಿ 1ಕ್ಕೆ.	0	3	0	6	0	6	0	6	0	6
4	ಕತ್ತೆ ಹೊರೆ ಪ್ರತಿ 1ಕ್ಕೆ	0	1	0	3	0	3	0	3	0	3
5	ತಲೆ ಹೊರೆ - ಡಿಟೋ	0	3	0	1	0	1	...		0	3
6	ಖಾಲಿ ಎತ್ತು, ಹಸ್ನೆ, ಎಮ್ಮೆ, ಕೋಣ, ಕುದುರೆ ಪ್ರತಿ 1ಕ್ಕೆ ...	...		0	3	...		0	3	...	
7	ಆಡು, ಅಥವಾ ಚೀಕೆ	...		0	1	0	1	0	1	...	
8	ಗುಡಾರ 1ಕ್ಕೆ	1	0	...		...		...		1	0
9	ಸಂತೆ ಕಟ್ಟಿಡದಲ್ಲಿ ಅಂಗಡಿ ಇಟ್ಟಿದ್ದಕ್ಕೆ ...	2	0	...		...		...		...	
10	ಚಿಲ್ರೆ ಅಂಗಡಿಗೆ	...		...		...		...		0	6

ಜಿ. ಹನುಮಂತರಾವ್, ಫಾರ್ ಪೈಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಜಗಲೂರು ಟರ್ನನಲ್ಲಿ ಪ್ರತಿ ಸಂತೆಗೆ ಬರತಕ್ಕ ಅಥವಾ ವಾಪಸು ಹೋಗತಕ್ಕ ಭರ್ತಿ ಗಾಡಿಮೇಲೆ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಜೂ ಆಖೈರುವರಿಗೆ ಹಾಸಲು ವಸೂಲ್ಮಾಡತಕ್ಕ ಹಕ್ಕನ್ನ ಬರುವ ಜೂ ತಿಂಗಳು 21ನೆ ತಾರೀಖು ಸೋಮವಾರ ಜಗಲೂರು ತಾಲ್ಲೂಕು ಕಛೇರಿಯಲ್ಲಿ ದಾವಣಗೆರೆ ಸಬ್ ಡಿವಿಜ್ ಸಾಹೇಬರವರು ಹರಾಜು ನಡಿಸುತ್ತಾರೆ. ಇ ಷ್ಟವಿರತಕ್ಕವರು ಆ ದಿವಸ ಹಾಜರಾಗಿ ಚಡ ಸವಾಲಿನಲ್ಲಿ ಪಡಿಯಬಹುದು.

ಹರಾಜು ಷರತ್ತುಗಳು.

2. ಚಡ ಸವಾಲುದಾರನು ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ದರದಂತೆ ಸಂತೆಗೆ ಮ್ಯುನಿಸಿಪಲ್ ಸರಹದ್ದಿನ ಆಚೆ ಯಿಂದ ಬರತಕ್ಕ ಮತ್ತು ಅಲ್ಲಿಂದ ವಾಪಸು ಹೋಗತಕ್ಕ ಭರ್ತಿಗಾಡಿಮೇಲೆ ಹಾಸಲು ವಸೂಲ್ಮಾಡಬೇಕು.

3. ಪ್ರೆಸಿಡೆಂಟ್ ಸಾಹೇಬರವರು ಏನೊಂದು ಕಾರಣವೂ ಇಲ್ಲದ್ದೇನೇ ಜಾಸ್ತಿ ಅಥವಾ ಯಾವ ಸವಾಲನ್ನು ಆಗಲಿ ಅಂಗೀ ಕರಿಸತಕ್ಕ ಯಾ ತಿರಸ್ಕರಿಸತಕ್ಕ ಅಧಿಕಾರವನ್ನು ಹೊಂದಿರುತ್ತಾರೆ.

4. ಕಂಟ್ರಾಕ್ಟು ಮೊಬಲಗನ್ನ ಹನ್ನೆರಡು ತಿಂಗಳಲ್ಲಿ ಸಮಭಾಗವಾಗಿ ಕೊಡತಕ್ಕದ್ದು. ಆಯಾಯ ಖಿಸ್ತಿನ ಮೊಬಲಗ ನ್ನ ಮೂರನೇ ತಿಂಗಳು 10ನೆ ತಾರೀಖಿನ ಒಳಗಾಗಿ ಯಾ ಅದಕ್ಕೆ ಮುಂಚಿತವಾಗಿಯೇ ಪಾವತಿ ಮಾಡಬೇಕು. ಹರಾಜು ಖೈದಾ ದಕೂಡ್ಲೆ ಆಖೈರು ಸವಾಲುದಾರನು ತನ್ನ ಕಂಟ್ರಾಕ್ಟನ್ನು ಕ್ರಮವಾಗಿ ನೆರವೇರಿಸತಕ್ಕಬಗ್ಗೆ ಎರಡು ತಿಂಗಳ ಖಿಸ್ತು ಮೊಬಲಗ ನ್ನ ತೇವಣಿ ಇಡಬೇಕು ಮತ್ತು ಕಂಟ್ರಾಕ್ಟುದಾರನು ಪ್ರತಿ ತಿಂಗಳ ಖಿಸ್ತು ಮೊಬಲಗು ಸರಿಯಾಗಿ ಪಾವತಿ ಮಾಡುವದರ ಖಾತರಿ ಗಾಗಿ ಲಾಯಕ್ ಜಾಮೀನನ್ನ ಕೊಡಬೇಕು.

5. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆ ಇದ್ದಲ್ಲಿ ಆಗಲಿ ಮತ್ತು ಸರಿಯಾದ ಜಾಮೀನು ಕೊಡದೇ ಹೋದ ಲ್ಲಿ ಆಗಲಿ ಎರಡನೇ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ಉಂಟಾಗತಕ್ಕ ನಷ್ಟದ ಮೊಬಲಗ್ಯೆ ಅವಲ್ ಹರಾಜುದಾರನನ್ನ ಗುರಿಪಡಿಸುತ್ತೆ. ಕ್ರಮವಾಗಿ ಮೊಬಲಗು ಪಾವತಿಯಾಗದೇಹೋದಲ್ಲಿ ಮೊಬಲಗು ಪಾವತಿಯಾಗುವ ತಾರೀಖಿನ ವರಿಗೂ ಮಾಹೇ ಯಾನ ರೂಪಾಯಿ ಬಂದಕ್ಕೆ ಬಂದು ಪೈ ನುತೆ ಖುಷ್ಕಿ ವಸೂಲ್ಮಾಡಲ್ಪಡುತ್ತೆ. ನಂತರ ಬಾಕಿ ಮೊಬಲಗು ಏನಾದರೂ ಇದ್ದರೆ ಕಂಟ್ರಾಕ್ಟುದಾರನಿಂದಾಗಲೀ ಯಾ ಜಾಮೀನುದಾರನಿಂದಾಗಲಿ ವಸೂಲಾಗತಕ್ಕದ್ದು.

6. ಕಂಟ್ರಾಕ್ಟುದಾರನು ಪ್ರತಿಯೊಬ್ಬ ಗಾಡಿದಾರನಿಗೂ ಹಾಸಲು ವಸೂಲಾದ ತಾರೀಖು ನಮೂದಿನಿಂದ ಬಂದು ತೀರುವಳಿ ರಕೀತಿ ಕೊಡಬೇಕು. ಅಲ್ಲದೆ ಕಂಟ್ರಾಕ್ಟುದಾರನು ಕ್ರಮವಾಗಿ ಹಾಸಲು ವಸೂಲ್ಮಾಡತಕ್ಕ ತಪಕೀಲು ಲೆಕ್ಕವನ್ನ ಇಡಲು ಖುದ್ದ ನಾಗಿರತಕ್ಕದ್ದು. ಸದರಿ ಲೆಕ್ಕವು ಪ್ರೆಸಿಡೆಂಟ್-ವೈಸ್ ಪ್ರೆಸಿಡೆಂಟ್ ಸಾಹೇಬರವರುಗಳ ಮತ್ತು ಮ್ಯುನಿಸಿಪಲ್ ಮೆಂಬರುಗಳ ಇನ್ ಸ್ಪೆಕ್ಷನ್ಗೆ ಒಳಪಟ್ಟುರತಕ್ಕದ್ದು.

7. ಯಾವಾಗಲಾಗಲಿ ಕಂಟ್ರಾಕ್ಟುದಾರನು ವಿಧಾಯಕವಾಗಿರುವ ದರಕ್ಕಿಂತಲು ಜಾಸ್ತಿಯಾದ ಹಾಸಲು ಕೇಳಿ ಯಾ ವಸೂಲ್ ಮ್ಮಾಡಿ ಯಾ ಟರ್ನ ಮಾರ್ಗವಾಗಿ ಸರಕ್ಕನ್ನ ಬಿಕರಿ ಮಾಡದೆ ಹೋಗತಕ್ಕ ಭರ್ತಿಗಾಡಿಮೇಲೆ ಸುಂಕ ಕೇಳಿದ ಸಂಗತಿಗಳು ಪ್ರೆಸಿ ಡೆಂಟ್ ಸಾಹೇಬರವರಿಗೆ ತೃಪ್ತಿಕರವಾಗುವಂತೆ ರುಜುವಾತಾದಲ್ಲಿ ಕಂಟ್ರಾಕ್ಟುದಾರನಿಂದ ತೇವಣಿ ಹಾಜರ್ಮಾಡಲ್ಪಟ್ಟ ಎರಡು ತಿಂಗಳ ಖಿಸ್ತು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಕೂಡ್ಲೆ ಕಂಟ್ರಾಕ್ಟು ಕ್ಯಾನಲ್ ಮಾಡಲ್ಪಡುತ್ತೆ.

ಷೆಡ್ಯೂಲ್.

		ರೂ.	ಆ.	ಪೈ.
1. ಪ್ರತಿ ಭರ್ತಿಗಾಡಿ		0	2	0

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

1. ಚಳ್ಳಕೆರೆ ಟರ್ನನಲ್ಲಿ ನಡಿಯತಕ್ಕ ಪ್ರತಿ ಸಂತೆಗೆ ಬರತಕ್ಕ ಭರ್ತಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಈ ಮಾ ರ್ಜಿನ್ನಲ್ಲಿ ಕಂಡ ಬೌಂಡರಿ ಅನುಸರಿಸಿ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಜೂ ಆಖೈರು ವರಿಗೆ ಹಾಸಲು ವಸೂಲ್ಮಾ ಡತಕ್ಕ ಹಕ್ಕನ್ನ ಜೂ ತಿಂಗಳು 24ನೆ ತಾರೀಖು ಗುರುವಾರ ಚ ಳ್ಳಕೆರೆ ತಾಲ್ಲೂಕು ಕಛೇರಿಯಲ್ಲಿ ಚಿತ್ರದುರ್ಗ ಸಬ್ ಡಿವಿಜ್ ಅಸಿ ಸ್ಟೆಂಟ್ ಕಮಿಷನರ್ ಸಾಹೇಬರವರು ಹರಾಜು ನಡಿಸುತ್ತಾರೆ. ಇಷ್ಟ ವಿರತಕ್ಕವರು ಆ ದಿವಸ ಹಾಜರಾಗಿ ಚಡಸವಾಲಿನಲ್ಲಿ ಪಡಿಯಬಹುದು.

ಬೌಂಡರಿ.

ಪೂರ್ವಕ್ಕೆ—ದೊಡ್ಡೇರಿಹಳ್ಳ.
ಪಶ್ಚಿಮಕ್ಕೆ—ಚಿತ್ರದುರ್ಗದ ರೋಡು 18ನೆ ಮೈಲಿ 3ನೆ ಫರ್ಲಾಂಗು.
ಉತ್ತರಕ್ಕೆ—ಬಳ್ಳಾರಿ ರಸ್ತೆ ಕಟ್ಟೆ ಕಪಿಲೆ ಭಾವಿ.
ದಕ್ಷಿಣಕ್ಕೆ—ಬೆಂಗಳೂರು ರೋಡು ನಗರಂಗೆರೆದಾರಿ.

ಹರಾಜು ಷರತ್ತುಗಳು.

2. ಚಡ ಸವಾಲುದಾರನು ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ದರದಂತೆ ಸಂತೆ ದಿವಸ ಸಂತೆ ಜಾಗಾದಲ್ಲಿ ಕಲಿಸು ತಕ್ಕ ಭರ್ತಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಹಾಸಲು ವಸೂಲ್ಮಾಡಬೇಕು. ಬಂದೇ ಗಾಡಿಗೆ ಎರಡು ದಫಾ ಫೀ ವಸೂ ಲ್ಮಾಡಕೂಡದು.

3 ಪ್ರೆಸಿಡೆಂಟ್ ಸಾಹೇಬರವರು ಏನೊಂದು ಕಾರಣವೂ ಇಲ್ಲದೇನೆ ಜಾಸ್ತಿ ಅಥವಾ ಯಾವ ಸವಾಲನ್ನಾಗಲಿ ಅಂಗೀಕರಿಸತಕ್ಕ ಯಾ ತಿರಸ್ಕರಿಸತಕ್ಕ ಅಧಿಕಾರವನ್ನು ಹೊಂದಿರುತ್ತಾರೆ.

4. ಕಂಟ್ರಾಕ್ಟು ಮೊಬಲಗನ್ನು ಹನ್ನೆರಡು ತಿಂಗಳಲ್ಲಿ ಸಮಭಾಗವಾಗಿ ಕೊಡತಕ್ಕದ್ದು. ಆಯಾಯ ಖಿಸ್ತಿನ ಮೊಬಲಗನ್ನು ಮೂರನೇ ತಿಂಗಳು 10ನೆ ತಾರೀಖಿನೊಳಗಾಗಿ ಯಾ ಅದಕ್ಕೆ ಮುಂಚಿತವಾಗಿಯೇ ಪಾವತಿ ಮಾಡಬೇಕು. ಹರಾಜು ಬೈದಾದಕೂಡ್ಲೆ ಆಖೈರು ಸವಾಲುದಾರನು ತನ್ನ ಕಂಟ್ರಾಕ್ಟನ್ನು ಕ್ರಮವಾಗಿ ನೆರವೇರಿಸತಕ್ಕ ಬಗ್ಗೆ ಎರಡು ತಿಂಗಳ ಖಿಸ್ತು ಮೊಬಲಗನ್ನು ತೇವಣಿ ಇಡಬೇಕು, ಮತ್ತು ಕಂಟ್ರಾಕ್ಟುದಾರನು ಪ್ರತಿ ತಿಂಗಳ ಖಿಸ್ತು ಮೊಬಲಗು ಸರಿಯಾಗಿ ಪಾವತಿ ಮಾಡುವದರ ಖಾತ್ರಿಗಾಗಿ ಲಾಯಕ್ಕು ಜಾಮೀನನ್ನು ಕೊಡಬೇಕು.

5. ಹರಾಜು ಬೈದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆ ಇದ್ದಲ್ಲಿ ಆಗಲೆ ಮತ್ತು ಸರಿಯಾದ ಜಾಮೀನು ಕೊಡದೇ ಹೋದಲ್ಲಿ ಆಗಲಿ ಎರಡನೇ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ಉಂಟಾಗತಕ್ಕ ನಷ್ಟವನ್ನು ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಕ್ರಮವಾಗಿ ಮೊಬಲಗು ಪಾವತಿಯಾಗದೆ ಹೋದಲ್ಲಿ ಮೊಬಲಗು ಪಾವತಿಯಾಗುವ ತಾರೀಖಿನ ವರಿಗೂ ಮಾಹೇಯಾನ ರೂಪಾಯಿ ಬಂದಕ್ಕೆ ಬಂದು ಪೈ ನಂತೆ ೬ ಡ್ಡಿ ವಸೂಲ್ಮಾಡಲ್ಪಡುತ್ತೆ. ನಂತರ ಬಾಕಿ ಮೊಬಲಗು ಯೇನಾದರೂ ಇದ್ದರೆ ಕಂಟ್ರಾಕ್ಟುದಾರನಿಂದ ಆಗಲಿ ಯಾ ಜಾಮೀನುದಾರನಿಂದಾಗಲಿ ವಸೂಲಾಗತಕ್ಕದ್ದು.

6. ಕಂಟ್ರಾಕ್ಟುದಾರನು ಪ್ರತಿ ಒಬ್ಬ ಗಾಡಿದಾರನಿಗೂ ಯಾ ಎತ್ತಿನ ಯಾ ಕತ್ತೆಗಳ ಮಾಲೀಕನಿಗೂ ಹಾಸಲು ವಸೂಲಾದ ತಾರೀಖು ನಮೂದಿನಿಂದ ಒಂದು ತೀರುವಳಿ ರಸೀತಿ ಕೊಡಬೇಕು ಅಲ್ಲದೆ ಕಂಟ್ರಾಕ್ಟುದಾರನು ಕ್ರಮವಾಗಿ ಹಾಸಲು ವಸೂಲ್ಮಾಡತಕ್ಕ ತಪಶೀಲು ಲೆಕ್ಕವನ್ನು ಇಡಲು ಬದ್ಧನಾಗಿರತಕ್ಕದ್ದು. ಸದರಿ ಲೆಕ್ಕವು ಪ್ರೆಸಿಡೆಂಟ್ ವೈಸ್ ಪ್ರೆಸಿಡೆಂಟ್ ಸಾಹೇಬರವರುಗಳು ಮತ್ತು ಮ್ಯುನಿಸಿಪಲ್ ಮೆಂಬರುಗಳ ಇನ್ಸ್ಪೆಕ್ಷನ್ನಿಗೆ ಒಳಪಟ್ಟಿರತಕ್ಕದ್ದು.

7. ಯಾವಾಗಲಾಗಲಿ ಕಂಟ್ರಾಕ್ಟುದಾರನು ವಿಧಾಯಕವಾಗಿರುವ ದರಕ್ಕಿಂತಲು ಜಾಸ್ತಿ ಯಾದ ಹಾಸಲು ಕೇಳಿ ಯಾ ವಸೂಲ್ಮಾಡಿ ಯಾ ಟವರ್ ಮಾರ್ಗವಾಗಿ ದರಕನ್ನು ಬೆಕರಿ ಮಾಡದೆ ಹೋಗತಕ್ಕ ಛತ್ರಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಸುಂಕ ಕೇಳಿದ ಸಂಗತಿಗಳು ಪ್ರೆಸಿಡೆಂಟ್ ಸಾಹೇಬರವರಿಗೆ ತೃಪ್ತಿಕರವಾಗುವಂತೆ ರುಜುವಾತಾದಲ್ಲಿ ಕಂಟ್ರಾಕ್ಟುದಾರನಿಂದ ತೇವಣಿ ಹಾಜರ್ಮಾಡಲ್ಪಟ್ಟ ಎರಡು ತಿಂಗಳ ಖಿಸ್ತು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಕೂಡ್ಲೆ ಕಂಟ್ರಾಕ್ಟು ಕ್ಯಾನಸಲ್ ಮಾಡಲ್ಪಡುತ್ತೆ.

ಷೆಡ್ಯೂಲ್.

				ರೂ.	ಆ.	ಪೈ.
1.	ಪ್ರತಿ ಛತ್ರಿ ಗಾಡಿ	...	...	 0	2	0
2.	ಡಿಟೋ ಎತ್ತು	...	...	... 0	0	6
3.	ಡಿಟೋ ಕತ್ತೆ	...	...	... 0	0	6

ಡಿ. ಶ್ರೀನಿವಾಸ್ಯೆಯ್ಯಂಗಾರ್,
ಫಾರ್ ಪ್ರೆಸಿಡೆಂಟ್

ಮೈಸೂರ್ ಜೈಲ್.

ತಾರೀಖು 29ನೆ ಮೇ 1909ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಮೈಸೂರು ಜೈಲಿನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸ 1909ನೆ ಇಸವಿ ಜುಲೈ ಗುರಿ ಲಾಗಾಯತು 1910ನೆ ಇಸವಿ ಜೂ. 30ನೆ ತಾರೀಖಿನ ವರಿಗೆ (ಆ ಎರಡು ದಿನಗಳೂ ಸೇರಿ) ಕೆಳಗೆ ನಮೂದು ಮಾಡುವ ಜಿನಸು ವಗೈರೆಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್ಟೆಂಡೆಂಟರವರಿಂದ, ಸ 1909ನೆ ಇಸವಿ ಜೂ 19ನೆ ಶನಿವಾರ ಹಗಲು 9 ಘಂಟೆ ವರಿಗೆ ತೆಗೆದುಕೊಳ್ಳಲ್ಪಡುವದು.

(2) ಮೇಲೆ ನಮೂದು ಮಾಡುವ ತಾರೀಖಿನ ನಂತರ ಯಾವ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದಿಲ್ಲಾ.

(3) ದರಖಾಸ್ತುಗಳೊಡನೆ 500 ರೂಪಾಯಿ ತೇವಣಾತಿ ಮೊಬಲಗನ್ನು ಹಾಜರು ಮಾಡಬೇಕು.

(4) ಈ ಮೇರಿಗೆ ನಗದಾಗಲಿ, ಕರೆನ್ಸಿ ನೋಟಾಗಲಿ ತೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

(5) ದರಖಾಸ್ತುಗಳು ಮೈಸೂರು ಜೈಲ್ ಸೂಪರ್ಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರುಗಳ ರೂಬರೂನ ಮೇಲ್ಕಂಡ ತಾರೀಖಿನಲ್ಲಿ ಖುಲ್ಲಾ ಮಾಡಲ್ಪಡುವದು.

(6) ದರಖಾಸ್ತುಗಳಲ್ಲಿ ಕೆಳಗೆ ವಿವರಿಸುವ ಸರಬರಾಯಿ ಆಗುವ ಜಿನಸಿಗಳ ದರ ರೂಪಾಯಿ ಬಂದಕ್ಕೆ ಇಷ್ಟು ಪೌಂಡು ಯಂತ ನಮೂದಾಗಬೇಕು, ಮತ್ತು ಜಿನಸಿಗಳು ಒಳ್ಳೇದಾಗಿರಬೇಕು. ಹಾಲಿಗೆ ಮಾತ್ರ ರೂಪಾಯಿ ಬಂದಕ್ಕೆ ಇಷ್ಟು ಪೈಂಟ್ ಎಂದು ನಮೂದಿರಬೇಕು.

ಬಂದು ವರುಷಕ್ಕೆ ಬೇಕಾದ ಜಿನಸಿಗಳ ಪಟ್ಟಿ.

	ಸುಮಾರು ಎಷ್ಟು ಪೌಂಡು ಬೇಕಾದ್ದು.		ಸುಮಾರು ಎಷ್ಟು ಪೌಂಡು ಬೇಕಾದ್ದು.
ಅಕ್ಕಿ (ಕುಸಲಕ್ಕಿ ಮತ್ತು ಬೆಣತಕ್ಕಿ)	20,000	ತುಪ್ಪ (ಅವಲ್ ಥರಹಾ)	20
ರಾಗಿ (ಅವಲ್ ಥರಹಾ) ...	80,000	ಬಳ್ಳೆಂಣೆ ...	2,000
ತೊಗರಿಬೇಳೆ ಡಿಟೋ	12,000	ತರಕಾರಿ ...	23,000
ಅವರೆಬೇಳೆ ಡಿಟೋ ...	18,000	ಬೆಣಗಿದ ಸೌದೆ ...	80,000
ಖಾರದ ಸಾಮಾನು ಯಾ ಪುಡಿ (ಬೆಣಸಿನ ಪುಡಿ)	1,000	ಸಕ್ಕೆ)	600
ಉಪ್ಪು	2,000	ರವೆ ...	700
ಈರುಳ್ಳಿ	2,000	ರೊಟ್ಟಿ ...	300
ಬೆಳ್ಳುಳ್ಳಿ	20	ಹಾಲು	8,000 ಪೈಂಟುಗಳು.
ಹುಣಸೆಹಣ್ಣು	2,000	ಮೊಸರು	100 (ಪೌಂಡು)
		ಮೂಳೆ ಇಲ್ಲದ ಮಾಂಸ	100 ಪೌಂಡು.

ಮೇಲೆ ನಮೂದು ಮಾಡಿರುವ ಜಿನಸಿನ ಪೊತ್ತಗಳು ಇಷ್ಟೇ ತೆಗೆದುಕೊಳ್ಳುತ್ತೇವೆಂದು ಖಾತರಿ ದೊರೆಯಲಾರದು.